ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ, ಇಂಟರ್‌ಸ್ಟೇಟ್ ಡಿಸ್ಪ್ಯೂಟ್ ಇರುವುದರಿಂದ ನಿಧಾನ ವಾಗಿದೆ ಎಂದು ಮಾನ್ಯ ಸಚಿವರು ತಿಳಿಸಿದರು. ಆದರೆ ಕಾವೇರಿ ವೇಸಿನ್ ಬಗ್ಗೆ ಕೂಡ ಬಹಳ ವರ್ಷ ಗಳಿಂದ ಡಿಸ್ಪ್ಯೂಟ್ ಇದ್ದರೂ ಕೂಡ ಹೇಮಾವತಿ, ಕಬಿನಿ, ಹಾರಂಗಿ ಯೋಜನೆಗಳನ್ನು ತಾವು ಕೈಗೊಂಡಿಲ್ಲವೇ ಹಾಗೆನೇ ನಮ್ಮ ಮಾನ್ಯ ಮಂತ್ರಿಗಳವರು ದೊಡ್ಡ ಮನಸ್ಸು ಮಾಡಿ ನಮ್ಮ ಜಿಲ್ಲೆಯ ಜನಗಳ ಕಷ್ಟಸುಖಗಳನ್ನು ಅರಿತವರಾದುದರಿಂದ ಅವರ ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಮತ್ತೆ ನನ್ನ ೨೦, ೨೫ ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ೨-೩ ವರ್ಷಗಳಿಗೊಮ್ಮೆ ಬರ ಬೇರೆ ಬರುತ್ತಿದೆ. ಪಶ್ಚಿಮ ಘಟ್ಟಗಳಲ್ಲಿರತಕ್ಕ ಜನರು ಈ ಬರಗಾಲದ ಕಷ್ಟವನ್ನು ಪರಿಹರಿಸಿಕೊಳ್ಳಲು ಬೇರೆ ಕಡೆಗೆ ಕೆಲಸ ಹುಡುಕಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ಈ ಬಡಪಾಯಿ ಜನರ ಕಷ್ಟವನ್ನು ನಿವಾರಣೆ ಮಾಡಲು ಮಾನ್ಯ ಮುಖ್ಯಮಂತ್ರಿಗಳವರು ಸಹಾಯಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬೇರೆ ಬೇರೆ ಯೋಜನೆಗಳನ್ನು ಕೈಗೊಂಡಿರುವಾಗ ಇದನ್ನು ಸಹ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿ ಗಳವರು ದೊಡ್ಡ ಮನಸ್ಸು ಮಾಡಬೇಕೆಂದು ಕೇಳಿಕೊಂಡು ಅವರು ದೊಡ್ಡ ಮನಸ್ಸು ಮಾಡುತ್ತಾರೆ ಎನ್ನುವ ಆಶಾಭಾವನೆಯಿಂದ ನಮ್ಮ ಜನತೆಯ ಪರವಾಗಿ ಈಗಲೇ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ ಸ್ವಾಮಿ, ನಾನು ಅವರಿಂದ ಇದಕ್ಕೆ ಸೂಕ್ತವಾದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ ಅಧ್ಯಕ್ಷರೇ.

ಶ್ರೀ ಆರ್. ಗುಂಡೂರಾವ್.— ರಿಪೋರ್ಟ್ ಕಳುಹಿಸಿ ಕೊಟ್ಟಿದ್ದಾರೆ. ಮತ್ತೆ ಸೆಂಟ್ರಲ್ ಗೌವರ್ನ್‌ಮೆಂಟಿನವರಿಂದ ಏನು ಉತ್ತರ ಬರುತ್ತದೆಯೋ ನೋಡೋಣ. ಪುನ: ಬೇಕಾದರೆ ಇನ್ನೊಂದು ಸಾರಿ ಟೆಕ್ನಿಕಲ್ ಎಕ್ಸ್‌ಪರ್ಟ್‌ರವರಿಂದ ಎಗ್ಸಾಮಿನ್ ಮಾಡಿಸೋಣ. We are not averse to taking up any project.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ, ನನ್ನ ಪ್ರಶ್ನೆ ಇಷ್ಟೇ. ಅಲ್ಲಿಯ ಜನರು ಕೂಡ ಅತ್ಯಂತ ವಿನಯದಿಂದ ನಡೆದುಕೊಂಡಿದ್ದಾರೆ. ಆದುದರಿಂದ ತಾವು ಆದಷ್ಟು ಜಾಗ್ರತೆ ಶುರು ಮಾಡುತ್ತೇವೆಂದು ಆಷ್ಟು ಮಾತ್ರ ಹೇಳಿ ಬಿಡಿ ಸಾಕು, ತಾವು ಯಾವತ್ತಾದರೂ ಮಾಡಿಯೇ ಮಾಡುತ್ತೀರಾ ಆಷ್ಟು ನಂಬಿಕೆ ತಮ್ಮ ಮೇಲೆ ನಮಗೆಲ್ಲಾ ಇದೆ.

ಶ್ರೀ ಆರ್. ಗುಂಡೂರಾವ್.—ವಿಚಾರ ಮಾಡುತ್ತೇವೆಂದು ಹೇಳಿದ್ದೇನೆ, ನೋಡೋಣ.

ಶ್ರೀ ಗಂಗಾಧರಪ್ಪ.—ಇದನ್ನು ಪುನರ್ ಪರಿಶೀಲನೆ ಮಾಡುವ ಸಮಯದಲ್ಲಿ ಅರಸೀಕೆರೆ ತಾಲ್ಲೂಕನ್ನು ಸೇರಿಸಿಕೊಂಡು ಅಲ್ಲಿಗೂ ಸಹ ನೀರನ್ನು ಒದಗಿಸಿ ಕೊಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರು ಆಶ್ವಾಸನೆ ಕೊಡುತ್ತಾರೆಂದು ನಂಬಿ ನಮ್ಮ ಅರಸೀಕೆರೆ ಜನತೆಯ ಪರವಾಗಿ ಅವರಿಗೆ ವಂದಿಸುತ್ತೇನೆ ಸ್ವಾಮಿ.

ಶ್ರೀ ಆರ್. ಗುಂಡೂರಾವ್—ಅದನ್ನೂ ವಿಚಾರ ಮಾಡೋಣ.

MR. SPEAKER —Question hour is over.

QUESTIONS FOR ANSWERS ON THE DAY
(but not taken up)

Adulterating Palmoliene Oil and selling at higher rates in fair price shops and Co-operative societies etc.

249 SRI C.M. ARUMUGHAM (K.G.F.).—Will the Minister for Food and Civil Supplies be pleased to state.-

(a) whether it has come to the notice of the Government that certain Fair Price Depots and Co-operative Societies in Bangarpet Taluk are adulterating Palmoliene Oil and selling at higher rates.

(b) the number of such Fair Price Shops and Co-operative Societies and their names and addresses that are indulging in these type of mal-practices;

(c) the action taken by the Government against such Depots and Societies?

SRI MANIK RAO SHAMA RAO PATIL (Minister for Food and Civil Supplies).—

(a) No.

(b) & (c) Does not arise.

Allegations against the Police Sub-Inspector of Periyapatna Town.

292 SRI K.S. KALAMARI GOWDA (Periyapatna).—Will the Minister be pleased to state.—

(a) the report furnished by the State Vigilance Commission on the allegations of acceptance of the illegal gratification by the Police Sub-Inspector Sri Jogappanavar of Periyapatna;

(b) the reasons and object of not keeping the delinquent official under suspension by the concerned senior officers even after the Chief Minister ordered for his suspension after the receipt of Vigilance Commission Report?

SRI R. GUNDU RAO (Chief Minister).—

(a) The State Vigilance Commission have recommended to keep Police Sub-Inspector A.N. Jogappanavar of Periyapatna Police Station under suspension on the allegation of acceptance of illegal gratification of Rs. 200.

(b) The Police Sub-Inspector has been kept under suspension.

REPRESENTATION BY MEMBERS

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಾನು, ಮುನಿರೆಡ್ಡಿಪಾಳ್ಯದಲ್ಲಿ ವಿಷಪೂರಿತ ಮದ್ಯವನ್ನು ಸೇವಿಸಿ ಮೃತಪಟ್ಟ ವಿಚಾರವಾಗಿ ರೂಲ್ 340ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ...

ಅಧ್ಯಕ್ಷರು.—ಆ ಬಗ್ಗೆ ಮಾನ್ಯ ಮಂಬ್ರಿ ಮಂತ್ರಿಗಳು ಹೇಳಿಕೆ ನೀಡುತ್ತಾರೆ.

ಒಬ್ಬರು ಮಾನ್ಯ ಸದಸ್ಯರು.—ನನ್ನ ಕ್ಷೇತ್ರದಲ್ಲಿರತಕ್ಕ ಮಹದೇವ ಎಂಬ ತಹಶೀಲ್ದಾರರ ನಡವಳಿಕೆ ಬಗ್ಗೆ ನಾನು ಹತ್ತಾರು ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ, ಅವರ ದೌರ್ಜನ್ಯವನ್ನು ತಡೆಯುವುದಕ್ಕಾಗುವುದಿಲ್ಲವೆಂದು ಇವತ್ತೂ ಕೂಡ ಒಂದು ಟೆಲಿಗ್ರಾಂ ಬಂದಿದೆ...

ಅಧ್ಯಕ್ಷರು.—ದಯವಮಾಡಿ ಕುಳಿತುಕೊಳ್ಳಿ. ಆ ರೀತಿ ಅಧಿಕಾರಿಗಳ ಹೆಸರನ್ನೆಲ್ಲ ಹೇಳಿದರೆ ಅದೆಲ್ಲ ರೆಕಾರ್ಡಿಗೆ ಹೋಗುವುದಿಲ್ಲ, ಮಂತ್ರಿಗಳ ಜೊತೆ ಅಧಿಕಾರಿಗಳ ಹೆಸರನ್ನು ಹೇಳಿ ಪ್ರಸ್ತಾಪಿಸುವುದು ಸರಿಯಾದ ಕ್ರಮವಲ್ಲ.